ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ

# KARNATAKA STATE FINANCIAL CORPORATION

Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ MD/240/2022-23/ ದಿನಾಂಕ : 30/07/2022

Ref. No. KSFC/H.O./

**CIRCULAR NO – 1002 (C)**

Sub : Modified Special Package Scheme for establishing Textile Units Promoted by SC / ST Entrepreneurs.

Ref : 1) Circular No. 1002 dated 2.6.2018
2) Circular No, 1002 dated 25.07.2018
3) Circular No. 1002 (B) dated 1.1.2019

------

Government of Karnataka had introduced Special package for SC/ST Entrepreneurs to establish textile industries and the same has been implemented in the Corporation vide the above referred circulars. However, considering the substantial loans already sanctioned under the scheme and insufficient budgetary allocation towards grant, it was decided by the Corporation to put on hold for further sanctions of loan vide ION dated 10.2.2020.

The scheme has been reviewed by the SC/ST Development Commission and based on the decisions taken by the Commission the modified scheme has been issued vide GO No. ಸರ್ಕಾರದ ಆದೇಶ ಸಂಖ್ಯೆ ವಾಕೈ 44 ಜಕೈಯೋ 2017 (ಭಾ-1) ಬೆಂಗಳೂರು ದಿನಾಂಕ 1.1.2022. A copy of the same is enclosed for ready reference.

The salient features of the modified scheme are as follows:

a. In the scheme, though there is a provision for extending loans upto 90% of cost of fixed assets, (excluding land cost) considering eligibility of soft seed capital and the better utilization of the scheme, it has been decided to link the working out quantum of term loan based on Debt Equity Ratio 2:1 (excluding land cost) as per the prevailing lending policy, including capital grant/subsidy component of 75% of project cost subject to maximum of Rs.200.00 lakhs.
b. The project should be implemented as approved by the District Level Single Window Agency and Textile Department, if there are any deviations release of loan shall be made only with the concurrence of the Government.
c. The capital grant/subsidy component to be fixed at 75% of the project cost subject to maximum of Rs.200.00 lakhs as detailed in GO.
d. Out of the total eligible capital grant/subsidy amount worked out as above, the grant/subsidy amount eligible for building and civil work is to be fixed upto 30% subject to maximum of Rs.60.00 lakhs and eligible grant amount for plant and machinery is fixed up to 70%, subject to maximum of Rs.140.00 lakhs.
e. In respect of Readymade Garments unit, out of the eligible grant amount, for building and civil works is fixed upto 40% subject to maximum of Rs.80.00 lakhs and for plant and machinery at 55% subject to maximum of Rs.110.00 lakhs and for working capital at 5% maximum of Rs.10.00 lakhs.
f. In respect of cases where loans are Rs.75.00 lakhs and below, an option may be given to the borrowers for availing the loan under interest subsidy scheme of Social Welfare Department which is operated through KSFC or of Textile department. If they opt for interest subsidy from Textile department, the loan from KSFC shall not be considered under interest subsidy scheme of Social Welfare department.

g. The project shall be completed within 18 months from the date of first disbursement of the grant amount by the Government.
h. The release of the grant amount will be made by Government in installment based on the progress made in the implementation of the project.
i. The projects considered under this scheme shall run for minimum period of 10 years and in case, if it is stopped working for a period of one year, the borrowers are supposed to refund the entire grant amount to the Government.
j. The scheme benefit is available only for one person in a family.
k. After loans are fully repaid, the Textile Dept shall have the First Charge of the unit.

Term loan eligibility may be worked out based on DER of 2:1 (excluding land cost) as per prevailing Lending Policy. Out of this, the eligible grant amount may be worked out as per GO subject to maximum cap of Rs.200.00 lakhs will have a separate loan account (Textile Grant) and balance term loan may be sanctioned under term loan – interest subsidy SC/ST scheme.

The loan shall be backed by the collateral security at 22.5% of the project cost, if the loan component is Rs.200.00 lakhs and below. If the loan requirement is more than Rs.200.00 lakhs (including loan against grant) the collateral security shall be taken as per the prevailing lending policy for the loan component in excess of Rs.200.00 lakhs.

Grant component shall be released by the Government of Karnataka directly to KSFC, Head Office, in stages as detailed in Government Order which shall be adjusted to the term loan account of the borrower. Till the receipt of the grant component, the borrower is liable to pay interest as per the norms of KSFC.

The other details of the scheme including eligibility of the borrower, repayment period, limit of accommodation, working capital, legal documentation, entering tripartite agreement, joint inspection etc., are as per the prevailing lending policy / existing guidelines issued earlier and GO dated 1.1.2022.

The Branch Managers are hereby instructed to accept and process the loan proposals for establishing textile units promoted by SC/ST entrepreneurs under Modified Special Package Scheme of GoK, keeping in view the above points and norms laid down in the Government Order and Lending Policy.

29/7

**MANAGING DIRECTOR**

To

All the BMs, AGMs, DGMs of Branch Offices
All the AGMs of Audit Cells
All the Department Heads of HO
EA to MD
General Managers, ED 1 and ED 2
Library

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನೇಕಾರರ ಪ್ಯಾಕೇಜ್ ಯೋಜನೆ–ವಿಶೇಷ ಘಟಕ / ಗಿರಿಜನ ಉಪ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ ನೀಡುವ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ವಾಕೈ 44 ಜಕೈಯೋ 2017, ದಿನಾಂಕ: 24.11.2018.
2. ದಿನಾಂಕ:02.07.2021 ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳ / ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯ ನಿರ್ಣಯ.
3. ಸರ್ಕಾರದ ಆದೇಶ ಸಂಖ್ಯೆ:ವಾಕೈ 44 ಜಕೈಯೋ 2017(ಭಾ–1), ದಿನಾಂಕ:10.12.2021

* * * * *

ಮೇಲೆ(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ರಾಜ್ಯದ ಜವಳಿ ಉದ್ದಿಮೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ / ಜವಳಿ ಸಹಕಾರಿ ಸಂಘ / ಸಂಸ್ಥೆಯ ವತಿಯಿಂದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕ ಪ್ರಾರಂಭಿಸುವುದನ್ನು ಉತ್ತೇಜಿಸುವ ಸಲುವಾಗಿ ಈ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿರುತ್ತದೆ. ಜವಳಿ ಉದ್ದಿಮೆಯನ್ನು ಪ್ರಾರಂಭಿಸುವವರಿಗೆ ವರಮಾನ ಹೆಚ್ಚಿಸಲು ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಒದಗಿಸುವ ಉದ್ದೇಶದಿಂದ ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ನೇಕಾರರ ಪ್ಯಾಕೇಜ್ ಯೋಜನೆಯಡಿ ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಗಳಡಿಯಲ್ಲಿ ರಾಜ್ಯ ಸರ್ಕಾರದ ಸಹಾಯಧನ ನೀಡಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಮೇಲೆ(2)ರಲ್ಲಿ ಓದಲಾದ ರಾಜ್ಯ ಅನುಸೂಚಿತ ಜಾತಿಗಳ / ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಎಸ್.ಎಂ.ಇ. ಜವಳಿ / ಸಿದ್ಧ ಉಡುಪು ಘಟಕಗಳಿಗೆ ಬಂಡವಾಳ ವೆಚ್ಚದಲ್ಲಿ 75% ಸಹಾಯಧನ ಮತ್ತು 15% ಬಡ್ಡಿ ಸಹಾಯಧನ ನೀಡಲಾಗುತ್ತಿದ್ದು, ಕಳೆದ 3 ವರ್ಷಗಳಲ್ಲಿ ಒದಗಿಸಿದ ಅನುದಾನಕ್ಕಿಂತ ಹೆಚ್ಚಿನ ಮೊತ್ತದಲ್ಲಿ ಘಟಕಗಳನ್ನು ಮಂಜೂರು ಮಾಡಿದ್ದರಿಂದ ಅನುದಾನ ಕೊರತೆಯುಂಟಾಗಿರುವುದನ್ನು ಗಮನಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ:–

1. ಅಪೂರ್ಣಗೊಂಡಿರುವ ಘಟಕಗಳಿಗೆ ಜೇಷ್ಠತೆಯ ಮೇಲೆ ಮಂಜೂರಾತಿಯಂತೆ ಸಹಾಯಧನ ನೀಡುವುದು.
2. ಮಂಜೂರಾದ ಘಟಕಗಳು ಕೆ.ಎಸ್.ಎಫ್.ಸಿ. ಮತ್ತು ಬ್ಯಾಂಕ್ ಗಳಿಂದ 4% ಬಡ್ಡಿ ದರದಲ್ಲಿ ಸಾಲ ಪಡೆದಿದ್ದಲ್ಲಿ, ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಬಡ್ಡಿ ಸಹಾಯಧನ ನೀಡುವ ಅವಶ್ಯಕತೆಯಿಲ್ಲ.
3. ಹೊಸದಾಗಿ ಮಂಜೂರು ಮಾಡುವ ಘಟಕಗಳಿಗೆ ಸಹಾಯಧನವನ್ನು 75% ಅಥವಾ ಗರಿಷ್ಠ ರೂ.2.00 ಕೋಟಿಗಳಿಗೆ ಮಿತಿಗೊಳಿಸುವುದು.
4. ಕೆ.ಎಸ್.ಎಫ್.ಸಿ. ಮತ್ತು ಬ್ಯಾಂಕ್ ಗಳಿಂದ 4% ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದೇ ಇರುವ ಘಟಕಗಳಿಗೆ ಮಾತ್ರ ಬಡ್ಡಿ ಸಹಾಯಧನ ನೀಡುವುದು.
5. ಎಸ್.ಎಂ.ಇ. ಘಟಕಗಳಿಗೆ ನಿಗದಿಪಡಿಸಿದ ಅನುದಾನದಲ್ಲಿ 25% ಅನುದಾನವನ್ನು ಹೊಸ ಘಟಕಗಳಿಗೆ ಬಂದಿರುವ ಅರ್ಜಿಗಳ ಜೇಷ್ಠತೆಯ ಮೇಲೆ ಸಹಾಯಧನ ಮಂಜೂರು ಮಾಡಬಹುದು.

ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಹೊರಡಿಸಲಾದ ಉಲ್ಲೇಖಿತ(1)ರ ಆದೇಶವನ್ನು ಮಾರ್ಪಡಿಸಿ ಜವಳಿ ಉದ್ದಿಮೆಯಲ್ಲಿ ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ

..2

ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು, ಪರಿಷ್ಕರಿಸಿದ ಅಂಶಗಳೊಂದಿಗೆ ಸಹಾಯಧನ ಬಿಡುಗಡೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಹೊರಡಿಸುವ ಕುರಿತು ಸಚಿವ ಸಂಪುಟದ ಅನುಮೋದನೆಯೊಂದಿಗೆ ಮೇಲೆ (3) ರಲ್ಲಿ ಓದಲಾದ ಸರ್ಕಾರದ ಆದೇಶವನ್ನು ಹೊರಡಿಸಲಾಗಿತ್ತು. ಸದರಿ ಆದೇಶದ ಅನುಷ್ಠಾನದಲ್ಲಿ ಕೆಲವು ಲೋಪದೋಷಗಳು ಕಂಡು ಬಂದಿದ್ದರಿಂದ ಸದರಿ ಆದೇಶವನ್ನು ಸಂಪೂರ್ಣವಾಗಿ ಹಿಂಪಡೆದು ಈ ಕೆಳಗಿನಂತೆ ಪರಿಷ್ಕೃತ ಆದೇಶವನ್ನು ಹೊರಡಿಸಲು ತೀರ್ಮಾನಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 44 ಜಕೈಯೋ 2017(ಭಾ-1) ಬೆಂಗಳೂರು, ದಿನಾಂಕ:01.01.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ವಾಕೈ 44 ಜಕೈಯೋ 2017(ಭಾ-1), ದಿನಾಂಕ:10.12.2021 ಅನ್ನು ಸಂಪೂರ್ಣವಾಗಿ ಹಿಂಪಡೆದು, ರಾಜ್ಯದ ಜವಳಿ ಉದ್ದಿಮೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ / ಜವಳಿ ಸಹಕಾರಿ ಸಂಘ / ಸಂಸ್ಥೆಯ ವತಿಯಿಂದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳನ್ನು ಪ್ರಾರಂಭಿಸಲು ಉತ್ತೇಜಿಸುವ ಸಲುವಾಗಿ ನೇಕಾರರ ಪ್ಯಾಕೇಜ್ ಯೋಜನೆ- ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಗಳಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸರ್ಕಾರದಿಂದ ಸಹಾಯಧನ ಬಿಡುಗಡೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಈ ಕೆಳಗಿನಂತೆ ನಿಗದಿಪಡಿಸಿ ಆದೇಶಿಸಿದೆ:-

1. ಎಸ್.ಎಂ.ಇ ( Small & Micro Enterprises: Investment in Plant & Machinery) ಘಟಕದ ವಿವರ:
   - Micro - ರೂ.1.00 ಕೋಟಿಗಳವರೆಗಿನ ಯಂತ್ರೋಪಕರಣಗಳೊಂದಿಗೆ ಸ್ಥಾಪಿಸುವ ಘಟಕ
   - Small- ರೂ.1.00 ಕೋಟಿಯಿಂದ ರೂ.10.00 ಕೋಟಿಗಳವರೆಗಿನ ಯಂತ್ರೋಪಕರಣ ಗಳೊಂದಿಗೆ ಸ್ಥಾಪಿಸುವ ಘಟಕ.

**ಯೋಜನೆಯ ಅರ್ಹತೆ:**

I. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಸಂಘ / ಸಂಸ್ಥೆಗಳು / ಕಂಪನಿ ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರತಕ್ಕದ್ದು.

II. ಸಹಕಾರ ಕಾಯ್ದೆಯಡಿ ನೊಂದಾಯಿತ ಜವಳಿ ಸಹಕಾರ ಸಂಘಗಳು ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರತಕ್ಕದ್ದು.

III. ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಘಟಕ ಸ್ಥಾಪಿಸಲು ಉದ್ದೇಶಿಸಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ / ಜವಳಿ ಸಹಕಾರ ಸಂಘ / ಸಂಸ್ಥೆಯ ಹೆಸರಿನಲ್ಲಿ ಭೂ-ಪರಿವರ್ತನೆಯಾಗಿ ಕೈಗಾರಿಕೆಗೆ ಯೋಗ್ಯವಾದ ಜಮೀನು ಹೊಂದಿರತಕ್ಕದ್ದು ಅಥವಾ ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. ಯಿಂದ ಕೈಗಾರಿಕಾ ನಿವೇಶನ ಹಂಚಿಕೆಯಾದ ಬಗ್ಗೆ ಸ್ವಾಧೀನ ಪತ್ರ ಹಾಗೂ ನೊಂದಾಯಿತ ಲೀಸ್ ಕಮ್ ಸೇಲ್ ಅಗ್ರಿಮೆಂಟ್ ಹೊಂದಿರತಕ್ಕದ್ದು ಅಥವಾ ಕನಿಷ್ಠ 25 ವರ್ಷಗಳ ದೀರ್ಘಾವಧಿ ಕಾಲಕ್ಕೆ ಸ್ಥಳೀಯ ನೊಂದಾಣಾಧಿಕಾರಿಗಳಿಂದ ನೊಂದಾಯಿಸಲ್ಪಟ್ಟ ಭೂಮಿ / ಕಟ್ಟಡವನ್ನು ಬಾಡಿಗೆ / ಲೀಸ್ ಗಾಗಿ ಹೊಂದಿರತಕ್ಕದ್ದು.

IV. ಜವಳಿ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವ ಜವಳಿ ಸಹಕಾರ ಸಂಘ / ಎನ್.ಜಿ.ಓ. / ಟ್ರಸ್ಟ್ / ಸಂಸ್ಥೆಗಳು ನೊಂದಾಯಿಸಿ ಕನಿಷ್ಠ 03 ವರ್ಷಗಳಾಗಿರಬೇಕು.

V. ಜವಳಿ ಸಹಕಾರ ಸಂಘ / ಸಂಸ್ಥೆಯವರು ಸಣ್ಣ ಪ್ರಮಾಣದಲ್ಲಿ ಸ್ಥಾಪಿಸುವ ಘಟಕದಲ್ಲಿ ತಾಂತ್ರಿಕ ಅರ್ಹತೆ (Diploma /B.Tech(Textile)/ ಅನುಭವವುಳ್ಳ ಕನಿಷ್ಠ ಒಬ್ಬರನ್ನು ನೇಮಕಾತಿ ಮಾಡತಕ್ಕದ್ದು.

2. ಅ. ಹಣಕಾಸಿನ ಮೂಲ:-

a) ಯೋಜನೆಯ ಅನುಷ್ಠಾನವನ್ನು ಸುಗಮಗೊಳಿಸಲು ಬ್ಯಾಂಕ್ / ಹಣಕಾಸು ಸಂಸ್ಥೆಗಳು ಉದ್ದೇಶಿತ ಯೋಜನಾ (ಸ್ಥಿರಾಸ್ತಿಗಳ) ಮೊತ್ತದ ಶೇ.90 ರಷ್ಟು ಸಾಲವನ್ನು ನೀಡಬಹುದಾಗಿದ್ದು, ಕನಿಷ್ಠ ಶೇ.50 ರಷ್ಟು ಸಾಲವನ್ನು ಯೋಜನಾ ಫಲಾನುಭವಿಗಳು ಪಡೆಯತಕ್ಕದ್ದು.

b) ಬ್ಯಾಂಕ್ / ಹಣಕಾಸು ಸಂಸ್ಥೆಯು ಸಾಲಕ್ಕೆ ಮಾತ್ರ ಪೂರಕ ಭದ್ರತೆ (Collateral Security) ಯನ್ನು First Charge ನೊಂದಿಗೆ ಪಡೆಯತಕ್ಕದ್ದು.

c) ಬ್ಯಾಂಕ್ / ಹಣಕಾಸು ಸಂಸ್ಥೆಯಿಂದ ಘಟಕಕ್ಕೆ ಮಂಜೂರಾದ ಒಟ್ಟು ಸಾಲದಲ್ಲಿ ಘಟಕ ವೆಚ್ಚದ ಶೇ.22.5 ರಷ್ಟು ಮೊತ್ತಕ್ಕೆ ಪೂರಕ ಭದ್ರತೆಯನ್ನು ಪಡೆಯುವ ಜೊತೆಗೆ ಸಾಲ ನೀಡಿದ ಸ್ಥಿರಾಸ್ತಿಯ ಮೇಲಿನ ಮೊದಲ ಹಕ್ಕನ್ನು ಹೊಂದಿರತಕ್ಕದ್ದು.

d) ಬ್ಯಾಂಕ್ / ಹಣಕಾಸು ಸಂಸ್ಥೆಯ ಸಾಲದ ಮೊತ್ತವು ಪೂರ್ಣ ಮರುಪಾವತಿಯಾಗುವವರೆಗೂ ಮಾತ್ರ ಘಟಕದ ಸ್ಥಿರಾಸ್ತಿಯ ಮೇಲೆ ಆರ್.ಬಿ.ಐ. ನಿಯಮಗಳನ್ವಯ ಕಾನೂನು ಪ್ರಕಾರ ವಸೂಲಾತಿ ಅಧಿಕಾರವನ್ನು ಹೊಂದಿರುತ್ತದೆ. ಘಟಕವು ಬ್ಯಾಂಕ್ / ಹಣಕಾಸು ಸಂಸ್ಥೆಯ ಸಾಲವನ್ನು ಪೂರ್ಣ ಮರುಪಾವತಿಸಿದ ನಂತರ ಇಲಾಖೆಯು ಘಟಕದ First Charge ಅನ್ನು ಪಡೆಯುವಂತೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

e) ಬ್ಯಾಂಕ್ / ಹಣಕಾಸು ಸಂಸ್ಥೆಯು ಸಾಲ ಮಂಜೂರಾತಿ ನೀಡಿದ ಘಟಕದ ಯೋಜನಾ ಮೌಲ್ಯಮಾಪನ ವರದಿಯೊಂದಿಗೆ (Appraisal Report) ಕೈಮಗ್ಗ ಮತ್ತು ಜವಳಿ ಇಲಾಖೆಗೆ ಸಹಾಯಧನ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

2. ಆ. ಹಣಕಾಸಿನ ನೆರವು:

| ಕ್ರ ಸಂ. | ಯೋಜನೆ | ಸರ್ಕಾರದ ಬಂಡವಾಳ ಸಹಾಯಧನ Backend ರೂಪದಲ್ಲಿ | ಬಡ್ಡಿ ಸಹಾಯಧನ | | ಷರಾ |
|---|---|---|---|---|---|
| | | | ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆದಿದ್ದಲ್ಲಿ | ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದಿದ್ದಲ್ಲಿ | |
| 1 | ಪರಿಶಿಷ್ಟ ಜಾತಿ ಉಪ ಯೋಜನೆ | ಶೇ.75 ರಷ್ಟು ಅಥವಾ ಗರಿಷ್ಠ ರೂ.2.00 ಕೋಟಿಗಳಿಗೆ ಮಿತಿಗೊಳಿಸುವುದು | ಇಲ್ಲ | ಗರಿಷ್ಠ ರೂ.75.00 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 05 ವರ್ಷಗಳ ಅವಧಿಗೆ ಜವಳಿ ನೀತಿಯನ್ವಯ ಬಡ್ಡಿ ಸಹಾಯಧನವನ್ನು ಮರುಸಂದಾಯ ಮಾಡುವುದು | ಸರ್ಕಾರದ ಸಹಾಯಧನವನ್ನು ಯೋಜನೆಯ ಪ್ರಗತಿಯನ್ನು ಆಧರಿಸಿ ಅನುದಾನ ಲಭ್ಯತೆಯನುಸಾರವಾಗಿ Backend ರೂಪದಲ್ಲಿ ಬಿಡುಗಡೆ ಮಾಡಲಾಗುವುದು |
| 2 | ಗಿರಿಜನ ಉಪ ಯೋಜನೆ | ಶೇ.75 ರಷ್ಟು ಅಥವಾ ಗರಿಷ್ಠ ರೂ.2.00 ಕೋಟಿಗಳಿಗೆ ಮಿತಿಗೊಳಿಸುವುದು | ಇಲ್ಲ | ಗರಿಷ್ಠ ರೂ.75.00 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 05 ವರ್ಷಗಳ ಅವಧಿಗೆ ಜವಳಿ ನೀತಿಯನ್ವಯ ಬಡ್ಡಿ ಸಹಾಯಧನವನ್ನು ಮರುಸಂದಾಯ ಮಾಡುವುದು | |

..4

a) ಸಣ್ಣ ಮತ್ತು ಅತಿ ಸಣ್ಣ(ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಹೆಚ್ಚಿನ ಉತ್ತೇಜನ ನೀಡುವ ಉದ್ದೇಶದಿಂದ ಯೋಜನಾ ಮೊತ್ತವನ್ನು ಕಟ್ಟಡ (Building), ಯಂತ್ರೋಪಕರಣ (Plant & Machineries), ಯಂತ್ರೋಪಕರಣಗಳ ಸ್ಥಾಪನೆ (Erection), ಅನುಸ್ಥಾಪನ (Installation), ಜನರೇಟರ್ ಹಾಗೂ ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚ(Preliminary and Pre-Operative Expenses) ಗಳಿಗೆ ತಗಲುವ ಯೋಜನಾ (ಸ್ಥಿರಾಸ್ತಿಗಳ) ಮೊತ್ತದಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಮಿತಿ ರೂ.10.00 ಕೋಟಿಗಳವರೆಗಿನ ಬಂಡವಾಳ ಹೂಡಿಕೆಯನ್ನು ಮಾತ್ರ ಈ ಯೋಜನೆಯಡಿ ಪರಿಗಣಿಸಲಾಗುವುದು. ಸರ್ಕಾರದ ಸಹಾಯಧನದ ಮೊತ್ತವನ್ನು ಯೋಜನಾ ವೆಚ್ಚದ ಶೇ.75 ರಷ್ಟು ಅಥವಾ ಗರಿಷ್ಠ ರೂ.2.00 ಕೋಟಿಗಳಿಗೆ ಸೀಮಿತಗೊಳಿಸಲಾಗಿರುತ್ತದೆ. ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆದಿದ್ದಲ್ಲಿ, ಇಲಾಖೆಯು ಬಡ್ಡಿ ಸಹಾಯಧನ ನೀಡುವುದಿಲ್ಲ. ಆದರೆ ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದೇ ಇದ್ದಲ್ಲಿ, ಗರಿಷ್ಠ ರೂ.75.00 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 05 ವರ್ಷಗಳ ಅವಧಿಗೆ ಜವಳಿ ನೀತಿಯನ್ವಯ ಬಡ್ಡಿ ಸಹಾಯಧನವನ್ನು ಇಲಾಖೆಯಿಂದ ಮರುಸಂದಾಯ ಮಾಡಲಾಗುವುದು.

b) ಸರ್ಕಾರದ ಸಹಾಯಧನವನ್ನು ಬಿಡುಗಡೆ ಮಾಡುವ ಮುನ್ನ ಇಲಾಖೆಯ ಹಾಗೂ ಬ್ಯಾಂಕ್ / ಹಣಕಾಸು ಸಂಸ್ಥೆಯ ಅಧಿಕಾರಿಗಳು ಜಂಟಿಯಾಗಿ ಭೌತಿಕ ಪರಿಶೀಲನೆ ನಡೆಸಿ ಘಟಕವು ಯೋಜನೆಯ ಮಾರ್ಗಸೂಚಿಯನ್ವಯ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

c) ಸರ್ಕಾರದ ಸಹಾಯಧನವನ್ನು ಅನುದಾನ ಲಭ್ಯತೆಯನುಸಾರವಾಗಿ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಯೋಜನೆಯ ಅನುಷ್ಠಾನದ ಪ್ರಗತಿಯನ್ನಾಧರಿಸಿ Backend ರೂಪದಲ್ಲಿ ಬಿಡುಗಡೆ ಮಾಡಲಾಗುವುದು. ಯಾವುದೇ ಕಾರಣಕ್ಕೂ ಸಹಾಯಧನವನ್ನು ಫಲಾನುಭವಿ/ಸಂಸ್ಥೆಯ ಹಕ್ಕು ಎಂದು ಭಾವಿಸತಕ್ಕದ್ದಲ್ಲ.

d) 2020-21ನೇ ಸಾಲಿನಿಂದ ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಘಟಕಗಳಿಗೆ ನೀಡಲಾದ ಸಹಾಯಧನದ ಮೊತ್ತಕ್ಕೆ ವ್ಯತ್ಯಾಸದ ಅರ್ಹ ಸಹಾಯಧನದ ಮೊತ್ತವನ್ನು ನೀಡಲಾಗುವುದು.

e) ಯೋಜನೆ ಅನುಷ್ಠಾನಕ್ಕೆ ಅವಶ್ಯವಿರುವ ದುಡಿಮೆ ಬಂಡವಾಳವನ್ನು ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ / ಜವಳಿ ಸಹಕಾರ ಸಂಘ / ಸಂಸ್ಥೆಯವರೇ ಸ್ವತಃ ಭರಿಸತಕ್ಕದ್ದು ಅಥವಾ ಬ್ಯಾಂಕುಗಳಿಂದ/ ಹಣಕಾಸು ಸಂಸ್ಥೆಗಳಿಂದ ಪಡೆದುಕೊಳ್ಳತಕ್ಕದ್ದು.

f) ಬ್ಯಾಂಕ್ / ಹಣಕಾಸು ಸಂಸ್ಥೆಗಳು ಸಾಲಕ್ಕೆ ವಿಧಿಸುವ ಬಡ್ಡಿದರಕ್ಕೆ ಅನುಗುಣವಾಗಿ ಬಡ್ಡಿ ಸಹಾಯಧನವನ್ನು ಫಲಾನುಭವಿಗಳು ಇಲಾಖೆಯಿಂದ ಹಿಂಪಡೆಯುವುದು. ಇದರ ಬಗ್ಗೆ ಆಯಾ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಅವಧಿಯ ಬಡ್ಡಿ ಪಾವತಿ ದೃಢೀಕರಣ ತಃಖ್ತೆಯನ್ನು ಸಲ್ಲಿಸತಕ್ಕದ್ದು.

3. <u>ಸರ್ಕಾರದ ಬಂಡವಾಳ ಸಹಾಯಧನ:</u>

a) ಸರ್ಕಾರದ ಬಂಡವಾಳ ಸಹಾಯಧನವನ್ನು ಯೋಜನೆಯ ಕಟ್ಟಡ (Building), ಯಂತ್ರೋಪಕರಣ (Plant & Machineries), ಯಂತ್ರೋಪಕರಣಗಳ ಸ್ಥಾಪನೆ (Erection), ಅನುಸ್ಥಾಪನ (Installation), ಜನರೇಟರ್ ಮತ್ತು ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚಗಳ (Preliminary and Pre-Operative Expenses) (ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ ಅಡಿ ಸ್ಥಿರಾಸ್ತಿಗಳಿಗೆ ಪರಿಗಣಿಸುವಂತೆ) ಹಾಗೂ ದುಡಿಮೆಯ ಬಂಡವಾಳಕ್ಕೆ ಮಾತ್ರ ಪರಿಗಣಿಸಲಾಗುವುದು ಸರ್ಕಾರದಿಂದ ನೀಡುವ ಬಂಡವಾಳ ಸಹಾಯಧನ ಶೇ.75 ರಷ್ಟು ಅಥವಾ ಗರಿಷ್ಠ ರೂ.200.00 ಲಕ್ಷಗಳ ಶೇಕಡಾವಾರು ಹಂಚಿಕೆಯ ವಿವರಗಳನ್ನು ಈ ಕೆಳಗಿನಂತೆ ಪರಿಗಣಿಸತಕ್ಕದ್ದು.

ಜವಳಿ ಘಟಕಗಳಿಗೆ (ಸಿದ್ಧ ಉಡುಪು ತಯಾರಿಕಾ ಘಟಕ ಹೊರತುಪಡಿಸಿ)ಬಂಡವಾಳ ಸಹಾಯಧನ ಶೇ.75 ರಷ್ಟು ಅಥವಾ ಗರಿಷ್ಠ ರೂ.200.00 ಲಕ್ಷಗಳ ಶೇಕಡಾವಾರು ಹಂಚಿಕೆ:

| ವೆಚ್ಚದ ವಿವರಗಳು | ಅರ್ಹ ಸಹಾಯಧನ |
|---|---|
| ಘಟಕದ ಸಿವಿಲ್ ಕಾಮಗಾರಿಗಳು | ಶೇ.30 ರಷ್ಟು ಅಥವಾ ಗರಿಷ್ಠ ರೂ.60.00 ಲಕ್ಷಗಳು |
| ಯಂತ್ರೋಪಕರಣಗಳು (Machineries), ಯಂತ್ರೋಪಕರಣಗಳ ಸ್ಥಾಪನೆ (Erection), ವಿದ್ಯುದ್ದೀಕರಣ (Energization), ಅನುಸ್ಥಾಪನ (Installation), ಜನರೇಟರ್(Generator) . ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚಗಳು (Preliminary and Pre-Operative Expenses) ಹಾಗೂ ದುಡಿಯುವ ಬಂಡವಾಳ (ಶೇ.5 ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳು) | ಶೇ.70 ರಷ್ಟು ಅಥವಾ ಗರಿಷ್ಠ ರೂ.140.00 ಲಕ್ಷಗಳು |

b) ಸದರಿ ಯೋಜನೆಯಡಿ ಸಿದ್ಧ ಉಡುಪು ತಯಾರಿಕಾ ಘಟಕದ ಯೋಜನೆಗಳಿಗೆ ಬಂಡವಾಳ ಸಹಾಯಧನ ಶೇ.75 ರಷ್ಟು ಅಥವಾ ಗರಿಷ್ಠ ಸಹಾಯಧನ ರೂ.200.00 ಲಕ್ಷಗಳಲ್ಲಿ ಕಟ್ಟಡವನ್ನು ನಿರ್ಮಿಸಲು ಶೇ.40 ರಷ್ಟು ಅಥವಾ ಗರಿಷ್ಠ ರೂ.80.00 ಲಕ್ಷಗಳನ್ನು ಹಾಗೂ ಯಂತ್ರೋಪಕರಣಗಳು(Machineries), ಯಂತ್ರೋಪಕರಣಗಳ ಸ್ಥಾಪನೆ (Erection), ವಿದ್ಯುದ್ದೀಕರಣ (Energization), ಅನುಸ್ಥಾಪನ (Installation), ಜನರೇಟರ್ (Generator) ಹಾಗೂ ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚ (Preliminary and Pre-Operative Expenses) ಗಳಿಗೆ, ಶೇ.55 ರಷ್ಟು ಅಥವಾ ಗರಿಷ್ಠ ರೂ.110.00 ಲಕ್ಷಗಳು ಹಾಗೂ ದುಡಿಮೆ ಬಂಡವಾಳಕ್ಕಾಗಿ ಶೇ.5 ರಷ್ಟು ಅಂದರೆ ರೂ.10.00 ಲಕ್ಷಗಳನ್ನು ನೀಡಲು ಪರಿಗಣಿಸತಕ್ಕದ್ದು.

c) 2017-18 ರಿಂದ 2019-20ನೇ ಸಾಲಿನವರೆಗೆ ನೇಕಾರರ ಪ್ಯಾಕೇಜ್ - ವಿಶೇಷ ಘಟಕ ಹಾಗೂ ಗಿರಿಜನ ಉಪ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ ಒದಗಿಸಲು ಹಿಂದಿನ 02 ಮಾರ್ಗಸೂಚಿಗಳನ್ವಯ ಅನುಮೋದನೆಯಾಗಿರುವ 110 ಎಸ್.ಸಿ.ಪಿ. ಹಾಗೂ 62 ಟಿ.ಎಸ್.ಪಿ. ಎಸ್.ಎಂ.ಇ. ಘಟಕಗಳ ಯೋಜನಾ ವೆಚ್ಚದಲ್ಲಿ ಪರಿಷ್ಕರಣೆ ಪ್ರಸ್ತಾವನೆಗಳಿದ್ದಲ್ಲಿ, ಪ್ರಸ್ತುತ ಈ ಕೆಳಗಿನಂತೆ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಸರ್ಕಾರದ ಸಹಾಯಧನದ ಅನುಪಾತದನುಸಾರ ಬಂಡವಾಳ ಸಹಾಯಧನ ಶೇ.75 ರಷ್ಟು ಅಥವಾ ಗರಿಷ್ಠ ರೂ.375.00 ಲಕ್ಷಗಳನ್ನು ಪರಿಷ್ಕರಿಸಲು ಹಾಗೂ ಕೆ.ಎಸ್.ಎಫ್.ಸಿ. ಮತ್ತು ಬ್ಯಾಂಕುಗಳಿಂದ 4% ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದೇ ಇರುವ ಘಟಕಗಳಿಗೆ ಮಾತ್ರ ಬಡ್ಡಿ ಸಹಾಯಧನ ಶೇ.15 ರಷ್ಟು ಅಥವಾ ಗರಿಷ್ಠ ರೂ.75.00 ಲಕ್ಷಗಳಿಗೆ ಹೀಗೆ ಒಟ್ಟಾರೆ ಗರಿಷ್ಠ ರೂ.450.00 ಲಕ್ಷಗಳ ಸಹಾಯಧನ ಮೀರದಂತೆ ಜವಳಿ ಅಭಿವೃದ್ಧಿ ಆಯುಕ್ತರು ತಮ್ಮ ಸ್ಪಷ್ಟ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

| ವೆಚ್ಚದ ವಿವರಗಳು | ಅರ್ಹ ಸಹಾಯಧನ |
|---|---|
| ಘಟಕದ ಸಿವಿಲ್ ಕಾಮಗಾರಿಗಳು | ಶೇ.30 ರಷ್ಟು ಅಥವಾ ಗರಿಷ್ಠ ರೂ.112.50 ಲಕ್ಷಗಳು (ಸಿದ್ಧ ಉಡುಪು ಘಟಕಕ್ಕೆ ಶೇ.40 ರಷ್ಟು ಅಥವಾ ಗರಿಷ್ಠ ರೂ.150.00 ಲಕ್ಷಗಳು) |
| ಯಂತ್ರೋಪಕರಣಗಳು (Machineries), ಯಂತ್ರೋಪಕರಣಗಳ ಸ್ಥಾಪನೆ (Erection), ವಿದ್ಯುದ್ದೀಕರಣ (Energization), ಅನುಸ್ಥಾಪನ (Installation), ಜನರೇಟರ್(Generator) . ಪ್ರಾಥಮಿಕ ಹಾಗೂ ಪೂರ್ವ ಆಪರೇಟಿವ್ ವೆಚ್ಚಗಳು (Preliminary and Pre-Operative Expenses) | ಶೇ.70 ರಷ್ಟು ಅಥವಾ ಗರಿಷ್ಠ ರೂ.262.50 ಲಕ್ಷಗಳು (ಸಿದ್ಧ ಉಡುಪು ಘಟಕಕ್ಕೆ ಶೇ.60 ರಷ್ಟು ಅಥವಾ ಗರಿಷ್ಠ ರೂ.225.00 ಲಕ್ಷಗಳು) |

d) ಈ ಯೋಜನೆಯಡಿ ಮಂಜೂರಾದ ಘಟಕಗಳು ಕೇಂದ್ರ ಸರ್ಕಾರದ Amended Technology Upgradation Fund Scheme (ATUFS) ಯೋಜನೆ ಹಾಗೂ ಇತರೆ ಯೋಜನೆಗಳ ಅಡಿಯಲ್ಲಿ ಎಸ್.ಎಂ.ಇ. ಘಟಕಗಳಿಗೆ ಲಭ್ಯವಿರುವ ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ.

e) ಯೋಜನೆಯ ಅನುಷ್ಠಾನಕ್ಕೆ ಬ್ಯಾಂಕಿನಿಂದ/ ಹಣಕಾಸು ಸಂಸ್ಥೆಯಿಂದ ಅಂತಿಮ ಸಾಲ ಮಂಜೂರಾತಿ ಪತ್ರದೊಂದಿಗೆ ಅವಶ್ಯ ದಾಖಲಾತಿಗಳನ್ನು ಸಲ್ಲಿಸಿದ ನಂತರ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ/ ಜವಳಿ ಸಹಕಾರ ಸಂಘ / ಸಂಸ್ಥೆಗೆ ಯೋಜನೆ ಅನುಷ್ಠಾನಕ್ಕೆ ಇಲಾಖೆಯಿಂದ ಮಂಜೂರಾತಿ ನೀಡಲಾಗುವುದು.

4. <u>ಸಹಾಯಧನ ಬಿಡುಗಡೆ ವಿಧಾನ:</u>

a) ಸರ್ಕಾರದ ಸಹಾಯಧನವನ್ನು ಪಡೆಯಲು ಯೋಜನೆಯ ಅನುಷ್ಠಾನಕ್ಕೆ ಅನುಮೋದನೆಯಾದ ಘಟಕಗಳಿಂದ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಗರಿಷ್ಠ 4 ಹಂತಗಳಲ್ಲಿ ಸಾಲ ನೀಡಿದ ಬ್ಯಾಂಕಿಗೆ / ಹಣಕಾಸು ಸಂಸ್ಥೆಗೆ ಅನುದಾನದ ಲಭ್ಯತೆಗೆ ಒಳಪಟ್ಟು ಸಹಾಯಧನ ಬಿಡುಗಡೆ ಮಾಡಲಾಗುವುದು.

b) ಬ್ಯಾಂಕ್ / ಹಣಕಾಸು ಸಂಸ್ಥೆಯು ಉದ್ದೇಶಿತ ಘಟಕದ ಸ್ಥಿರಾಸ್ತಿಯ ಶೇ.90 ರಷ್ಟು ಅವಧಿ ಸಾಲವನ್ನು ಮಂಜೂರು ಮಾಡಬಹುದಾಗಿದ್ದು ಮತ್ತು ಫಲಾನುಭವಿಯ ವಂತಿಕೆ ಅನುಪಾತಕ್ಕೆ ಅನುಗುಣವಾಗಿ ಯೋಜನೆಯ ಅನುಷ್ಠಾನಕ್ಕೆ ಸಾಲದ ಮೊತ್ತವನ್ನು ಬಿಡುಗಡೆ ಮಾಡುವುದು. ಆನಂತರ ಯೋಜನೆಯ ಪ್ರಗತಿಗನುಸಾರವಾಗಿ ಸರ್ಕಾರದ ಸಹಾಯಧನವನ್ನು ಬ್ಯಾಂಕ್ / ಹಣಕಾಸು ಸಂಸ್ಥೆಗೆ ಕಂತುಗಳ ಮೂಲಕ ಬಿಡುಗಡೆ ಮಾಡಲಾಗುವುದು.

c) ಈ ಯೋಜನೆಯಡಿ ಬಿಡುಗಡೆ ಮಾಡಲಾಗುವ ಸಹಾಯಧನವನ್ನು ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ ಯೋಜನೆಯಡಿ ಜವಳಿ ಪಾರ್ಕ್ ಗಳಿಗೆ ಯೋಜನೆಯ ಅನುಷ್ಠಾನಕ್ಕೆ ಸಹಾಯಧನ ಬಿಡುಗಡೆ ಮಾಡುವ ರೀತಿಯಲ್ಲಿ ಶೇ.75 ರ ಬಂಡವಾಳ ಸಹಾಯಧನ ಗರಿಷ್ಠ ರೂ.2.00 ಕೋಟಿಗಳ ಮೊತ್ತವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗುವುದು.

<u>1ನೇ ಕಂತು:</u> ಗರಿಷ್ಠ ಶೇ.30 ರಷ್ಟು – ಅನುಮೋದನೆ ನೀಡಿದ ಘಟಕಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಸಾಲ ನೀಡಿದ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು(ಶೇ.22.50).

<u>2ನೇ ಕಂತು:</u> ಗರಿಷ್ಠ ಶೇ.30 ರಷ್ಟು – ಮೊದಲನೇ ಕಂತಿನ ಸಹಾಯಧನ ಪಡೆದ ಘಟಕಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಸಾಲ ನೀಡಿದ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು(ಶೇ.22.50).

<u>3ನೇ ಕಂತು:</u> ಗರಿಷ್ಠ ಶೇ.30 ರಷ್ಟು – ಎರಡನೇ ಕಂತಿನ ಸಹಾಯಧನ ಪಡೆದ ಘಟಕಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಸಾಲ ನೀಡಿದ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು(ಶೇ.22.50).

....7

4ನೇ ಕಂತು: ಗರಿಷ್ಠ ಶೇ.10 ರಷ್ಟು – ಮೂರನೇ ಕಂತಿನ ಸಹಾಯಧನ ಪಡೆದ ಘಟಕಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೈಮ್ಸ್ ಗಳಿಗೆ ಪ್ರೋರೇಟಾ ಆಧಾರದ ಮೇಲೆ ಸಾಲ ನೀಡಿದ ಬ್ಯಾಂಕ್ / ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು(ಶೇ.7.50).

5. ಬಡ್ಡಿ ಸಹಾಯಧನ: ಈ ಮೊತ್ತವನ್ನು ಘಟಕದ ಸ್ಥಾಪನೆ ಹಾಗೂ ಉತ್ಪಾದನೆ ಪ್ರಾರಂಭಿಸಿದ ನಂತರ ಫಲಾನುಭವಿಯು ಬ್ಯಾಂಕಿಗೆ ಪಾವತಿಸಿದ ಬಡ್ಡಿ ಮೊತ್ತದ ಅನುಗುಣವಾಗಿ ಪ್ರಸ್ತಾವನೆ ಸಲ್ಲಿಸಿದ ನಂತರ ಘಟಕದವರು ಪಡೆದ, ಗರಿಷ್ಠ ರೂ.75.00 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 05 ವರ್ಷಗಳ ಅವಧಿಗೆ ಜವಳಿ ನೀತಿಯನ್ವಯ ಬಡ್ಡಿ ಸಹಾಯಧನವನ್ನು ಮರುಸಂದಾಯ ಮಾಡಲಾಗುವುದು. ಈ ಬಗ್ಗೆ ಸಂಬಂಧಪಟ್ಟ ಬ್ಯಾಂಕ್ / ಹಣಕಾಸು ಸಂಸ್ಥೆಯಿಂದ ದೃಢೀಕರಣ ತಃಖ್ತೆಯನ್ನು ಸಲ್ಲಿಸತಕ್ಕದ್ದು. (ಹಣಕಾಸು ಸಂಸ್ಥೆಗಳಿಂದ ಶೇ.4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದೇ ಇರುವ ಘಟಕಗಳಿಗೆ ಮಾತ್ರ).

6. ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ /ಜವಳಿ ಸಹಕಾರ ಸಂಘದ/ ಸಂಸ್ಥೆಯ ಪಾತ್ರ:

a) ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿ ಹಾಗೂ ನಿರ್ವಹಣೆ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ/ ಕಂಪನಿ / ಜವಳಿ ಸಹಕಾರ ಸಂಘ/ ಸಂಸ್ಥೆಗೆ ಅನ್ವಯಿಸುವುದು.

b) ಯೋಜನೆಯ ಅನುಷ್ಠಾನಕ್ಕೆ ಬೇಕಾದ ಭೂಮಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ವೈಯಕ್ತಿಕ ಫಲಾನುಭವಿಗಳು / ಪಾಲುದಾರಿಕೆ ಸಂಸ್ಥೆ / ಕಂಪನಿ/ ಜವಳಿ ಸಹಕಾರ ಸಂಘ / ಸಂಸ್ಥೆಯವರು ಹೊಂದಿರತಕ್ಕದ್ದು.

c) ಯೋಜನೆಗೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಪೂರ್ವಾನುಮತಿ ಪಡೆಯತಕ್ಕದ್ದು.

7. ದಾಖಲಾತಿಗಳು:

a) ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ/ ಕಂಪನಿ/ ಜವಳಿ ಸಹಕಾರ ಸಂಘ/ ಸಂಸ್ಥೆಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ಸಾಮಾನ್ಯ ದಾಖಲಾತಿಗಳು:

1. ಬ್ಯಾಂಕಿನಿಂದ ಯೋಜನೆಗೆ ನೀಡಲಾಗುವ ಅಂತಿಮ ಸಾಲ ಮಂಜೂರಾತಿ ಪತ್ರ.
2. ವಿವರವಾದ ಯೋಜನಾ ವರದಿ(ಡಿ.ಪಿ.ಆರ್).
3. ಖಾಲಿ ನಿವೇಶನ ದಾಖಲಾತಿಗಳು & ಆರ್.ಟಿ.ಸಿ. ಪ್ರತಿ / ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. ನಿಗಮಗಳಿಂದ ನಿವೇಶನ ಸ್ವಾಧೀನ ಪತ್ರ ಹಾಗೂ ನೊಂದಾಯಿತ ಲೀಸ್ ಕಮ್ ಸೇಲ್ ಅಗ್ರಿಮೆಂಟ್.
4. ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಕಟ್ಟಡದ ನಕ್ಷೆ ಮತ್ತು ಕಟ್ಟಡದ ಅಂದಾಜು ಪಟ್ಟಿ.
5. ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಮೊತ್ತವನ್ನು ಭರಿಸುವ ಬಗ್ಗೆ ಮುಚ್ಚಳಿಕೆ ಪತ್ರ.
6. ಯೋಜನೆಯ ಅನುಷ್ಠಾನಕ್ಕೆ ಅವಶ್ಯವಿರುವ ಇನ್ನಿತರೆ ದಾಖಲಾತಿಗಳು.

b) ಜವಳಿ ಸಹಕಾರ ಸಂಘ/ ಸಂಸ್ಥೆಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:

1. ಜವಳಿ ಸಹಕಾರ ಸಂಘ / ಸಂಸ್ಥೆಯ ಬಯೋ ಡೇಟಾ.
2. ಜವಳಿ ಸಹಕಾರ ಸಂಘ / ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.
3. ಜವಳಿ ಸಹಕಾರ ಸಂಘ / ಸಂಸ್ಥೆಯ ಬೈಲಾ ಪ್ರತಿ.
4. ಜವಳಿ ಸಹಕಾರ ಸಂಘ / ಸಂಸ್ಥೆಯ ಆಡಳಿತ ಮಂಡಳಿಯ ಠರಾವು ಪ್ರತಿ.

...8

5. ಜವಳಿ ಸಹಕಾರ ಸಂಘ / ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರ ಪಟ್ಟಿ.
6. ಜವಳಿ ಸಹಕಾರ ಸಂಘ / ಸಂಸ್ಥೆಯಲ್ಲಿ ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರುವ ಬಗ್ಗೆ ದೃಢೀಕರಣ ಪತ್ರ.
7. ಕಳೆದ ಮೂರು ವರ್ಷಗಳ ಆಡಿಟ್ ವರದಿ.

c) ಕಂಪನಿ / ಪಾಲುದಾರಿಕೆ ಸಂಸ್ಥೆಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:

1. ಕಂಪನಿ / ಪಾಲುದಾರಿಕೆ ಸಂಸ್ಥೆಯವರ ಬಯೋ ಡೇಟಾ.
2. ಕಂಪನಿ / ಪಾಲುದಾರಿಕೆ ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.
3. ಕಂಪನಿ / ಪಾಲುದಾರಿಕೆ ಸಂಸ್ಥೆಯ Memorandum and Article of Association ಪ್ರತಿ.
4. ಕಂಪನಿ / ಪಾಲುದಾರಿಕೆ ಸಂಸ್ಥೆಯ ಆಡಳಿತ ಮಂಡಳಿಯ ಠರಾವು ಪ್ರತಿ.
5. ಕಂಪನಿ / ಪಾಲುದಾರಿಕೆ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರ ಪಟ್ಟಿ.
6. ಕಂಪನಿ / ಪಾಲುದಾರಿಕೆ ಸಂಸ್ಥೆಯಲ್ಲಿ ಶೇ.100 ರಷ್ಟು ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರುವ ಬಗ್ಗೆ ದೃಢೀಕರಣ ಪತ್ರ.

d) ವೈಯಕ್ತಿಕ ಫಲಾನುಭವಿಗಳು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:

1. ಫಲಾನುಭವಿ ಬಯೋ ಡೇಟಾ.
2. ಇತ್ತೀಚಿನ ಭಾವ ಚಿತ್ರ ಮತ್ತು ಆಧಾರ್ ಕಾರ್ಡ್ ಪ್ರತಿ.
3. ಜಾತಿ ಪ್ರಮಾಣ ಪತ್ರ.
4. ವಿವರವಾದ ಯೋಜನಾ ವರದಿ (ಡಿ.ಪಿ.ಆರ್.)
5. ಜವಳಿ ವಲಯದಲ್ಲಿ ಅನುಭವವುಳ್ಳ ಫಲಾನುಭವಿಗಳಿಗೆ ಆದ್ಯತೆಯನ್ನು ನೀಡುವುದು.

8. <u>ಷರತ್ತು ಮತ್ತು ನಿಬಂಧನೆಗಳು</u>

a) ಯೋಜನೆಯ ಪ್ರಸ್ತಾವನೆಯನ್ನು "ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆ" ಯಲ್ಲಿ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಹಾಗೂ ಕರ್ನಾಟಕ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ–2013ರ ಕಾಯ್ದೆ ಅನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಾಜ ಕಲ್ಯಾಣ ಇಲಾಖೆ ಸಮಿತಿಗೆ ಪ್ರಗತಿ ವರದಿ ಮಂಡಿಸತಕ್ಕದ್ದು.

b) ಈ ಯೋಜನೆಯಡಿ ಪ್ರಸ್ತಾವನೆಗಳಿಗೆ ನೀಡುವ ಅನುಮೋದನೆಯು ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಮಿತಿಯನ್ನು ಮೀರತಕ್ಕದ್ದಲ್ಲ ಮತ್ತು ಅನುದಾನದ ನಿರೀಕ್ಷಣೆಯಲ್ಲಿ ಯಾವುದೇ ಅನುಮೋದನೆಯನ್ನು ನೀಡತಕ್ಕದ್ದಲ್ಲ.

c) ಸರ್ಕಾರದ ಮೊದಲನೇ ಕಂತಿಕೆ ಬಿಡುಗಡೆಯಾದ 18 ತಿಂಗಳ ಅವಧಿಯಲ್ಲಿ ಫಲಾನುಭವಿ/ ಜವಳಿ ಸಹಕಾರ ಸಂಘ / ಸಂಸ್ಥೆಯವರು ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು.

d) ಅನುಷ್ಠಾನಕ್ಕೆ ಅವಶ್ಯವಿರುವ ವಿವಿಧ ಇಲಾಖೆ/ ಸಕ್ಷಮ ಪ್ರಾಧಿಕಾರಗಳ ಅನುಮತಿಗಳನ್ನು ಪಡೆಯತಕ್ಕದ್ದು.

e) ಕಟ್ಟಡ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನಿಗದಿತ ಅನುಮೋದನೆ ಪಡೆಯತಕ್ಕದ್ದು.

f) ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರದಿಂದ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಗಳಿಗೆ ಬಳಸತಕ್ಕದ್ದು.

g) ಯೋಜನಾ ಅನುಷ್ಠಾನದಲ್ಲಿ ಬದಲಾವಣೆಗಳಿದ್ದಲ್ಲಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಜವಳಿ)ಯಿಂದ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸತಕ್ಕದ್ದು.

h) ಕೈಮಗ್ಗ ಮತ್ತು ಜವಳಿ ಇಲಾಖೆ, ಬ್ಯಾಂಕ್/ ಹಣಕಾಸು ಸಂಸ್ಥೆ ಹಾಗೂ ಫಲಾನುಭವಿ ಸೇರಿ ಮಾರ್ಗಸೂಚಿಯ ಷರತ್ತು ಮತ್ತು ನಿಬಂಧನೆಗಳನ್ನೊಳಗೊಂಡಂತೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಳ್ಳತಕ್ಕದ್ದು. ಬ್ಯಾಂಕ್ / ಹಣಕಾಸು ಸಂಸ್ಥೆಯು ಘಟಕದ ಪ್ರಗತಿಯ ಕುರಿತು ಮೇಲ್ವಿಚಾರಣೆಯನ್ನು ಕಡ್ಡಾಯವಾಗಿ ನಡೆಸತಕ್ಕದ್ದು.

i) ಒಂದು ವೇಳೆ ಘಟಕವು ನಿಷ್ಕ್ರಿಯಗೊಂಡಲ್ಲಿ ಘಟಕದ ಆಸ್ತಿಯನ್ನು ಬ್ಯಾಂಕ್/ ಹಣಕಾಸು ಸಂಸ್ಥೆಯ ವಶಕ್ಕೆ ಪಡೆದು ಚಾಲ್ತಿಯಲ್ಲಿರುವ ಕಾಯ್ದೆಯಡಿ ಅದನ್ನು ಮಾರಾಟ ಮಾಡಿ ಬಂದಂತಹ ಹಣವನ್ನು ವಿತರಿಸಲಾದ (ಬಾಕಿಯಿರುವ) ಸಾಲದ ಮೊತ್ತಕ್ಕೆ ಜಮೆ ಮಾಡಿಕೊಂಡು, ಹೆಚ್ಚುವರಿಯಾಗಿ ಉಳಿದಂತಹ ಮೊತ್ತವನ್ನು ಸರ್ಕಾರದಿಂದ ನೀಡಲಾದ ಅನುದಾನಕ್ಕೆ ಜಮೆ ಮಾಡತಕ್ಕದ್ದು.

j) ಯೋಜನಾ ಅನುಷ್ಠಾನದ ಪ್ರತಿ ಹಂತದ ಆರ್ಥಿಕ ಹಾಗೂ ಭೌತಿಕ ಪ್ರಗತಿಯನ್ನು ಇಲಾಖಾ ಅಧಿಕಾರಿಗಳು ಪರಿಶೀಲಿಸುವುದು.

k) ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಗತಿಯನ್ನು ಪರಿಗಣಿಸಿ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಕಂಪನಿ/ ಜವಳಿ ಸಹಕಾರ ಸಂಘ/ ಸಂಸ್ಥೆಯ ಹಣ ಹಾಗೂ ಸರ್ಕಾರದ ಅನುದಾನವನ್ನು ಪ್ರೋರೇಟಾ ಆಧಾರದ ಮೇಲೆ ಹಂತ ಹಂತವಾಗಿ ಬಿಡುಗಡೆ ಮಾಡುವುದು.

l) ಸದರಿ ಘಟಕವನ್ನು ಸರ್ಕಾರದ ಪೂರ್ವಾನುಮತಿ ಪಡೆಯದೆ ಮಾರಾಟ ಅಥವಾ ಪರಭಾರೆಯನ್ನು ಮಾಡತಕ್ಕದ್ದಲ್ಲ.

m) ಸರ್ಕಾರದ ಮೊದಲನೇ ವಂತಿಕೆ ಬಿಡುಗಡೆಯಾದ 18 ತಿಂಗಳ ಅವಧಿಯೊಳಗೆ ಈ ಯೋಜನೆ ಅಡಿ ಮಂಜೂರಾದ ಘಟಕವು ಕಾರ್ಯೋನ್ಮುಖವಾಗತಕ್ಕದ್ದು. ತಪ್ಪಿದಲ್ಲಿ ಸರ್ಕಾರದ ಮಂಜೂರಾತಿ ಆದೇಶವನ್ನು ಪುನರ್ ಪರಿಶೀಲಿಸಲಾಗುವುದು ಅಥವಾ ರದ್ದುಪಡಿಸಲಾಗುವುದು.

n) ಈ ಯೋಜನೆಯಡಿ ಮಂಜೂರಾದ ಘಟಕವು ಕನಿಷ್ಠ 10 ವರ್ಷಗಳ ಕಾಲ ನಿರಂತರವಾಗಿ ಚಾಲನೆಯಲ್ಲಿರತಕ್ಕದ್ದು. ಒಂದು ವೇಳೆ ಘಟಕವು ಒಂದು ವರ್ಷದವರೆಗೆ ಸ್ಥಗಿತಗೊಂಡಲ್ಲಿ, ಇಲಾಖೆಯಿಂದ ಬಿಡುಗಡೆಯಾದ ಪೂರ್ಣ ಅನುದಾನವನ್ನು ಸರ್ಕಾರಕ್ಕೆ ಮರುಪಾವತಿಸತಕ್ಕದ್ದು. ತಪ್ಪಿದಲ್ಲಿ ಚಾಲ್ತಿಯಲ್ಲಿರುವ ಕಾಯ್ದೆಯಡಿ ವಸೂಲಾತಿಗೆ ಕ್ರಮವಹಿಸಲಾಗುವುದು. ಈ ಬಗ್ಗೆ ಇಲಾಖೆಯ ಹಾಗೂ ಹಣಕಾಸು ಸಂಸ್ಥೆ/ ಬ್ಯಾಂಕಿನ ಅಧಿಕಾರಿಗಳು ಜಂಟಿಯಾಗಿ ಪರಿಶೀಲನೆ ನಡೆಸಿ ವಾರ್ಷಿಕ ವರದಿ ಸಲ್ಲಿಸುವುದು.

o) ನೇಕಾರರ ಪ್ಯಾಕೇಜ್ – ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ವಾಕೈ 44 ಜಕೈಯೋ 2017, ದಿನಾಂಕ:24.11.2018ರನ್ವಯ ಈಗಾಗಲೇ ಅನುಮೋದನೆ ಗೊಂಡಿರುವ 172 ಎಸ್.ಎಂ.ಇ. ಜವಳಿ ಘಟಕಗಳಿಗೆ ಅವುಗಳ ಜೇಷ್ಠತೆ, ಪ್ರಗತಿಯ ವಿಸ್ತರಣೆ ಮತ್ತು ಉದ್ಯೋಗ ಸೃಷ್ಠಿಯ ಆಧಾರದ ಮೇಲೆ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಶೇ.50 ರಷ್ಟನ್ನು ಬಳಸಿಕೊಳ್ಳತಕ್ಕದ್ದು. ಉಳಿದ ಶೇ.50 ರಷ್ಟನ್ನು ಇಲಾಖೆಯಲ್ಲಿ ಅನುಮೋದನೆಗೆ ಬಾಕಿಯಿರುವ 90 ಪ್ರಸ್ತಾವನೆಗಳಿಗೆ ಈ ಮಾರ್ಗಸೂಚಿಯಂತೆ ಪರಿಗಣಿಸುವುದು.

p) ಸದರಿ ಯೋಜನೆಯನ್ನು ಕುಟುಂಬದಲ್ಲಿನ ಒಬ್ಬ ಸದಸ್ಯರಿಗೆ ಮಾತ್ರ ನೀಡತಕ್ಕದ್ದು.

q) ಸರ್ಕಾರ / ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸುವ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸತಕ್ಕದ್ದು.

r) ಯೋಜನೆಯ ಕಾಮಗಾರಿ ಅನುಷ್ಠಾನದ ಆರಂಭದಲ್ಲೇ ಅನುದಾನ ಸಹಿತ ಯೋಜನೆಯ ವಿವರಗಳನ್ನೊಳಗೊಂಡ ಇಲಾಖೆ ನಿಗದಿಪಡಿಸಿ ನಿರ್ಧಿಷ್ಟಪಡಿಸಿದ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸಿದ್ದನ್ನು ಖಚಿತ ಪಡಿಸಿಕೊಂಡ ನಂತರವೇ ಸಹಾಯಧನ ಬಿಡುಗಡೆ ಮಾಡುವುದು.

s) ಸಹಾಯಧನ ಬಿಡುಗಡೆ ಮಾಡುವ ಪೂರ್ವದಲ್ಲಿ ಈಗಾಗಲೇ ಬಿಡುಗಡೆ ಮಾಡಿದ ಸಹಾಯಧನವು ಪೂರ್ಣ ಪ್ರಮಾಣದಲ್ಲಿ ಬಳಕೆಯಾದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರ, ಕಾಮಗಾರಿಯ ಛಾಯ ಚಿತ್ರ ಹಾಗೂ ಅನುದಾನದ ಬಳಕೆಯ ಬಗ್ಗೆ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆದು ಮುಂದಿನ ಕಂತಿನ ಸಹಾಯಧನ ಬಿಡುಗಡೆ ಮಾಡತಕ್ಕದ್ದು.

t) ಅಂತಿಮ ಕಂತಿನ ಸಹಾಯಧನ ಬಿಡುಗಡೆ ಮಾಡುವಾಗ ಒಟ್ಟಾರೆ ಬಿಡುಗಡೆ ಮಾಡಿದ ಸಹಾಯಧನ ಸಂಪೂರ್ಣ ಬಳಕೆಯ ಪ್ರಮಾಣ ಪತ್ರ ಹಾಗೂ ಕಾಮಗಾರಿಯ ಛಾಯಾ ಚಿತ್ರ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ದೃಢೀಕರಣ ಪ್ರಮಾಣ ಪತ್ರ ಪಡೆಯತಕ್ಕದ್ದು.

ಈ ಆದೇಶವನ್ನು ದಿನಾಂಕ:06.11.2021 ರಂದು ನಡೆದ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ: ಸಿ:429/2021 ರ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
B.V. 11/1/22.
(ಬಿ. ವೆಂಕಟೇಶಮೂರ್ತಿ)
ಸರ್ಕಾರದ ಉಪ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಜವಳಿ)

ಗೆ,

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
2. ಮಹಾಲೇಖಪಾಲರು (ಎ ಮತ್ತು ಇ) ಜಿ. ಅಂಡ್ ಎಸ್.ಎ. ಕರ್ನಾಟಕ, ಆಡಿಟ್ ಭವನ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಕೆ.ಎಸ್.ಎಫ್.ಸಿ. ಭವನ, ನಂ.1/1, ತಿಮ್ಮಯ್ಯ ರಸ್ತೆ, ಕಂಟೋನ್ ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು-560 052.
4. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಶುಭೋದಯ ಕಾಂಪ್ಲೆಕ್ಸ್, ನಂ.86, ರೈಲ್ವೆ ಸಮಾನಾಂತರ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.
5. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಪ್ರಿಯದರ್ಶಿನಿ ನೇಕಾರ ಭವನ, 1ನೇ ಮಹಡಿ, ಕೆ.ಹೆಚ್.ಪಾಟೀಲ ಕಾಲೇಜ್, ಎದುರುಗಡೆ, ನೇಕಾರ ಕಾಲೋನಿ, ವಿದ್ಯಾನಗರ, ಹುಬ್ಬಳ್ಳಿ-580 031.
7. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು(ಪ್ರಕರಣ ಸಂಖ್ಯೆ: ಸಿ:429/2021).
8. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಟ್ರೇಡ್ ಸೆಂಟರ್, ನಂ.29/4, ಮೊದಲನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
10. ಶಾಖಾಧಿಕಾರಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು(ಪ್ರಕರಣ ಸಂಖ್ಯೆ: ಸಿ:429/2021).
11. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ಹ್ಯಾಂಡ್ ಲೂಮ್ಸ್, ನಂ.49, ಮಾಡೆಲ್ ಹೌಸ್ ಸ್ಟ್ರೀಟ್, ಬಸವನಗುಡಿ, ಬೆಂಗಳೂರು-560 004.
12. ಎಲ್ಲಾ ಜಂಟಿ ನಿರ್ದೇಶಕರುಗಳು, ವಲಯ/ವಿಭಾಗಗಳು.
13. ನಿರ್ದೇಶಕರು ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
14. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ, ವಿಕಾಸ ಸೌಧ, ಬೆಂಗಳೂರು.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ.
3. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಬಿ ಅಂಡ್ ಆರ್), ವಿಧಾನ ಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ.
6. ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಎಂ.ಎಸ್.ಎಂ.ಇ & ಗಣಿ), ವಿಕಾಸ ಸೌಧ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-I), ವಿಧಾನ ಸೌಧ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.